## 51ನೇ ಹೆಚ್ಚುವರಿ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,

## ಬೆಂಗಳೂರು ನಗರ.

### *ಕ್ರಿಮಿನಲ್ ಪ್ರಕರಣ ಸಂಖ್ಯೆ: 35789/2025*

ಡಿ.ಡಬ್ಲ್ಯೂ. - 1 ದಿನಾಂಕ:14/07/2026

| | |
|---|---|
| ಸಾಕ್ಷಿಯ ಹೆಸರು | ಹರ್ಷ |
| ತಂದೆಯ ಹೆಸರು | ರಮೇಶ್ |
| ವಯಸ್ಸು | 38 ವರ್ಷಗಳು |
| ಉದ್ಯೋಗ | ಖಾಸಗಿ ಉದ್ಯೋಗ |
| ವಾಸ | ಬಗಲಗುಂಟೆ, ಬೆಂಗಳೂರು. |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ಎಸ್.ಎಂ.ಆರ್. ವಕೀಲರಿಂದ**

ನಾನು 2010 ರಿಂದ 2016 ರ ಫೆಬ್ರವರಿ ತಿಂಗಳವರೆಗೆ ಬಿ.ಎಫ್.ಡಬ್ಲ್ಯೂ ಕಾರ್ಖಾನೆಯಲ್ಲಿ ಪಿರ್ಯಾದಿಯೊಂದಿಗೆ ಕೆಲಸ ಮಾಡುತ್ತಿದ್ದೆ, ಆ ಕಾಲಕ್ಕೆ ಪಿರ್ಯಾದಿ ನನಗೆ ಪರಿಚಯವಾಗಿರುತ್ತಾರೆ. ಆ ವೇಳೆ ನಾನು ನನ್ನ ದರದು ನಿಮಿತ್ತ ಪಿರ್ಯಾದಿಯಿಂದ 50 ಸಾವಿರ ರೂಪಾಯಿಗಳನ್ನು ಕೈ ಸಾಲವಾಗಿ ಪಡೆದುಕೊಂಡಿದ್ದೆ. ನಾನು ಬಿ.ಎಫ್.ಡಬ್ಲ್ಯೂ ಕಾರ್ಖಾನೆಯ ಕೆಲಸ ಬಿಡುವ ವೇಳೆಗೆ ಸದರಿ ಸಾಲದ ಹಣವನ್ನು ಪಿರ್ಯಾದಿಗೆ ಸಂಪೂರ್ಣ ಪಾವತಿ ಮಾಡಿದ್ದೆ. ನಾನು ಸಂಪೂರ್ಣ ಹಣ ಪಾವತಿ ಮಾಡಿದ ಬಳಿಕವೂ ಪಿರ್ಯಾದಿ ನನಗೆ ಚೆಕ್ಕನ್ನು ವಾಪಸ್ಸು ಮಾಡಿರುವುದಿಲ್ಲ. ನಾನು ಪಿರ್ಯಾದಿಗೆ ಯಾವುದೇ ಹಣ ಬಾಕಿ ಕೊಡಬೇಕಾಗಿಲ್ಲ. ನಾನು ಪಿರ್ಯಾದಿ ಬಳಿ ಚೆಕ್ಕನ್ನು ಅನೇಕ ಬಾರಿ ಹಿಂದಿರುಗಿಸುವಂತೆ

ಕೇಳಿರುತ್ತೇನೆ, ಆದರೆ ಅವರು ಹಿಂದಿರುಗಿಸಿರುವುದಿಲ್ಲ. ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆದ್ದರಿಂದಪ್ರಕರಣವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀಸವಾಲು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿದೆ.)

**(ಓ.ಹೇ.ಕೇ.ಸ.)**

**(ಶ್ರೀ ಕೃಷ್ಣ.ಜೆ )**

**51ನೇ ಅ.ಮು.ಮ.ದಂ., ಬೆಂಗಳೂರು ನಗರ**

ಸಾಕ್ಷಿದಾರರ ಸಹಿಃ